# ಹೀಗೊಂದು ಕಿಸ್ ಪ್ರಸಂಗ..



ಅರ್ಜೆಂಟೀನಾದಿಂದ ಬಂದ ಮಾರ್ಕೆಲೊ ಕುಟುಂಬದ ಸದಸ್ಯರೊಂದಿಗೆ..

ಕಿಸ್ ಕೊಡುವುದು, ತಬ್ಬಿಕೊಳ್ಳುವುದು, ಶೇಕ್‌ಹ್ಯಾಂಡ್.. ಎಲ್ಲವೂ ಸ್ನೇಹಿತರು, ಬಂಧುಗಳು, ಆತ್ಮೀಯರು, ಪ್ರೇಮಿಗಳು ಪರಸ್ಪರ ಭೇಟಿಯಾದ ಕೂಡಲೇ ಮೊದಲು ಮಾಡುವ ಪ್ರಕ್ರಿಯೆ. ಇದು ವಿದೇಶಿ ಸಂಸ್ಕೃತಿ ಎಂಬ ಮನೋಭಾವನೆ ನಮ್ಮಲ್ಲಿ ಬಲವಾಗಿ ಬೇರೂರಿದೆ. ಕಿಸ್ ಕೊಡುವುದು ಪಾಶ್ಚಾತ್ಯರಲ್ಲಿ ಅತ್ಯಂತ ಸಹಜ ನಡವಳಿಕೆ. ಆದರೆ ನಮ್ಮಲ್ಲಿ ನಮಸ್ಕಾರ, ನಮಸ್ತೆ, ಹಲೋ.. ಮುಂತಾದವು ಶಿಷ್ಟಾಚಾರದ ಪ್ರತೀಕ.

ಅರ್ಜೆಂಟೀನಾದಿಂದ ಬೆಂಗಳೂರಿಗೆ ಉದ್ಯೋಗ ನಿಮಿತ್ತ ಬಂದ ಮಾರ್ಕೆಲೊ ಮರಾನೊ ಹಾಗೂ ಮೆಟಿಲ್ಡೆ ದಂಪತಿಗೆ ಇಲ್ಲಿನ ಶಿಷ್ಟಾಚಾರಗಳು ವಿಭಿನ್ನ ಅನುಭವ ನೀಡಿವೆ. ಅದೇ ರೀತಿ ಪರಸ್ಪರ ಮುತ್ತು ಕೊಡುವ ಬಗ್ಗೆಯೂ ಇಲ್ಲಿನವರ ಮನೋಭಾವನೆ ವಿಚಿತ್ರ ಎನಿಸಿದೆ. ಮುತ್ತು ಕೊಡುವುದರ ಬಗ್ಗೆ ಈ ವಿದೇಶೀಯರ ವಿಶ್ಲೇಷಣೆಯೇ ಬೇರೆ. ಅಲ್ಲಿ ಕಿಸ್ ವಿಷಯದಲ್ಲಿ ಮಡಿವಂತಿಕೆಯೇ ಇಲ್ಲ. ಸ್ನೇಹಿತರು, ಬಂಧುಗಳು ಸಿಕ್ಕಿದಾಗ ನಮಸ್ಕಾರ ಹೇಳಿ ಶೇಕ್ ಹ್ಯಾಂಡ್ ಮಾಡುವ ಬದಲಿಗೆ ಮುತ್ತು ಕೊಡುವುದು, ತಬ್ಬಿಕೊಳ್ಳುವುದು ಎಲ್ಲವೂ ಸಾಮಾನ್ಯವೇ.

ಬೆಂಗಳೂರಿನಲ್ಲಿ ಒಂದು ಸಲ ಹಾಸ್ಯಮಯ ಪ್ರಸಂಗವೊಂದು ನಡೆಯಿತಂತೆ. ಒಮ್ಮೆ ಮೆಟಿಲ್ಡೆ ಇಲ್ಲಿ ಯೋಗ ಶಿಕ್ಷಕಿಯೊಬ್ಬರನ್ನು ಭೇಟಿಯಾದರು. ಅವರನ್ನು ಕಂಡ ಕೂಡಲೇ ಮೊದಲು ಅವರಿಗೆ ಕಿಸ್ ಕೊಟ್ಟರಂತೆ. ಆಗ ಆ ಶಿಕ್ಷಕಿ ಇವರನ್ನು ದುರುಗುಟ್ಟಿಕೊಂಡು ನೋಡಿದರಂತೆ. ಇದರಿಂದ ಭಯಭೀತರಾದ ಮೆಟಿಲ್ಡೆಗೆ ತಾನೇನೋ ತಪ್ಪು ಮಾಡಿದೆ ಅನಿಸಿತಂತೆ. ಅದಾಗಿ ಇಲ್ಲಿನವರನ್ನು ಕಿಸ್ ಕಲ್ಚರ್ ಬಗ್ಗೆ ಕೇಳಿದಾಗಲೇ ಇಲ್ಲಿನ ಜನರ ಮಡಿವಂತಿಕೆ ಅವರಿಗೆ ಅರ್ಥವಾದದ್ದು ಅಂತೆ.

## ನಿಜಕ್ಕೂ ಸ್ವರ್ಗ

ನಮ್ಮ ನಾಡಿನ ಸಂಸ್ಕೃತಿಯನ್ನು ಬಯಸುವವರಿಗೆ ಬೆಂಗಳೂರು ನಿಜಕ್ಕೂ ಸ್ವರ್ಗ. ಬೆಂಗಳೂರಿನಲ್ಲಿ ಹೊರದೇಶಗಳಿಂದ ಬಂದವರಿಗೆ ಯಾವಾಗಲೂ ಏನಾದರೊಂದು ಅಚ್ಚರಿ ಕಾದಿರುತ್ತದೆ. ಅರ್ಜೆಂಟೀನಾದಿಂದ ಬಂದ ಮಾರ್ಕೆಲೊ ಮರಾನೊ ಮತ್ತು ಅವರ ಕುಟುಂಬದವರಿಗೆ ಬೆಂಗಳೂರೆಂದರೆ ಆನಂದ, ಅಚ್ಚರಿಗಳ ಸಂಗಮ. ಮಾರ್ಕೆಲೊ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದು, 2015ರಲ್ಲಿ ಬೆಂಗಳೂರಿಗೆ ಬಂದರು. ಪತ್ನಿ ಮಟಿಲ್ಡೆ ಮೊರೆನೊ ಹಾಗೂ ಮಕ್ಕಳಾದ ಜುಲಿಯೆಟಾ ಹಾಗೂ ಗುಡಲುಪೆ ಸಹ ಇವರೊಂದಿಗೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಈ ದೇಶಕ್ಕೆ ಬರುವುದಕ್ಕೂ ಮುನ್ನ ಮಾರ್ಕೆಲೊ ಮೆಕ್ಸಿಕೊ, ಬ್ರೆಜಿಲ್, ಯೂರೋಪ್‌ಗಳಲ್ಲಿ ಕೆಲಸ ಮಾಡಿ ಅನುಭವ ಪಡೆದಿದ್ದಾರೆ. ಇಲ್ಲಿಗೆ ಬರುವ ಮೊದಲು ಬೆಂಗಳೂರಿನ ಬಗ್ಗೆ ಅವರಿಗೆ ಏನೇನೂ ತಿಳಿದಿರಲಿಲ್ಲವಂತೆ. 'ಇಲ್ಲಿನ ಜನ, ಆಡುವ ಭಾಷೆ, ಸಂಸ್ಕೃತಿ, ಆಹಾರ ವಿಹಾರ ಎಲ್ಲವೂ ವಿಭಿನ್ನವಾಗಿದ್ದರೂ ಅದರ ಬಗ್ಗೆ ತಲೆಕೆಡಿಸಿಕೊಳ್ಳಲೇ ಇಲ್ಲ. ಇದೊಂದು ನಮ್ಮ ಸಾಹಸವೇ ಸರಿ' ಎಂದು ಹೇಳುತ್ತಾರೆ ಮಾರ್ಕೆಲೊ.

ಬೆಂಗಳೂರಿಗರ ವಿಶಾಲ ಮನೋಭಾವ ಈ ಕುಟುಂಬವನ್ನು ಬಹುವಾಗಿ ಸೆಳೆದಿದೆ. 'ಇಲ್ಲಿನ ಜನ ಸ್ನೇಹಪರರು ಹಾಗೂ ಯಾವ ಸಹಾಯ ಕೇಳಿದರೂ ನಿಸ್ವಾರ್ಥವಾಗಿ ಮಾಡುತ್ತಾರೆ. ಜನರ ತಾಳ್ಮೆ, ಸಹನಾಶೀಲತೆ, ಸ್ನೇಹಮಯಿ ಗುಣ ಬಹಳ ಹಿಡಿಸಿದೆ' ಎನ್ನುತ್ತಾರೆ ಮಾರ್ಕೆಲೊ.

ಇದೊಂದು ಐಟಿ ಹಬ್. ಉದ್ಯೋಗಕ್ಕಾಗಿ ಅರಸಿ ಬರುವವರಿಗೆ ಬೆಂಗಳೂರು ನಗರ ಸ್ವರ್ಗ. ಏನಾದರೊಂದು ಕೆಲಸ ಸಿಕ್ಕೇ ಸಿಗುತ್ತದೆ. ಸ್ವಂತ ದುಡಿಮೆಗೂ ಇಲ್ಲಿ ಉತ್ತಮ ಮನ್ನಣೆ ಸಿಗುತ್ತದೆ. ಹೀಗಾಗಿ ಉದ್ಯೋಗ ನಿಮಿತ್ತ ಇಲ್ಲಿಗೆ ಬಂದ ವಿದೇಶೀಯರು ಮರಳಿ ಹೋಗಲು ಇಷ್ಟಪಡುವುದೇ ಇಲ್ಲ.

'ನಾವು ಇಲ್ಲಿ ಬಹಳ ಕಂಫರ್ಟಬಲ್ ಆಗಿ ಇದ್ದೀವಿ. ಮಕ್ಕಳ ಶಿಕ್ಷಣ, ಒಳ್ಳೆಯ ಮನೆ, ಸುವ್ಯವಸ್ಥಿತ ಆಸ್ಪತ್ರೆಗಳು, ಓಡಾಡಲು ಉತ್ತಮ ರಸ್ತೆಗಳು, ಶಾಪಿಂಗ್‌ಗೆ ಮಾಲ್‌ಗಳು, ವೀಕೆಂಡ್ ಕಳೆಯಲು ಒಳ್ಳೆಯ ಹೋಟೆಲ್, ಟೈಂಪಾಸ್‌ಗೆ ಲಾಲ್‌ಬಾಗ್, ಕಬ್ಬನ್ ಪಾರ್ಕ್, ವಾಕಿಂಗ್‌ಗೂ ಸೂಕ್ತವಾದ ಜಾಗ ಎಲ್ಲವೂ ಚೆನ್ನಾಗಿದ್ದು ಇಲ್ಲಿ ಸಮಯ ಕಳೆಯಲು, ವಾಸ ಮಾಡಲು ಅತ್ಯಂತ ಯೋಗ್ಯವಾಗಿದೆ' ಎನ್ನುತ್ತಾರೆ ಮಾರ್ಕೆಲೊ.

'ಒಮ್ಮೆ ನಾವಿದ್ದ ಅಪಾರ್ಟ್‌ಮೆಂಟ್‌ನಿಂದ ಮನೆ ಖಾಲಿ ಮಾಡಬೇಕೆಂದು ಮಾಲೀಕರು ಹೇಳಿದರು. ನಾವು ಬೇರೆ ಮನೆ ಹುಡುಕಬೇಕಾಯಿತು. ಅದೃಷ್ಟವಶಾತ್ ಒಳ್ಳೆಯ ಮನೆಯೇ ಸಿಕ್ಕಿತು. ಆಗ ನಾವಿದ್ದ ಅಪಾರ್ಟ್‌ಮೆಂಟ್‌ನಲ್ಲೇ ಬೇರೆ ಮನೆಯವರು ನಮಗೆ ಬಹಳ ಸಹಾಯ ಮಾಡಿದರು. ಇದನ್ನು ಮರೆಯಲು ಸಾಧ್ಯವೇ ಇಲ್ಲ' ಎನ್ನುತ್ತಾರೆ ಮಟಿಲ್ಡೆ.

ಹಬ್ಬಗಳ ಆಚರಣೆ ಇಲ್ಲಿ ಇನ್ನೊಂದು ಕೌತುಕ. ಹಬ್ಬ ಆಚರಣೆಯಲ್ಲಿ ಇಲ್ಲಿನ ಜನರ ಶ್ರದ್ಧೆ, ಆಸಕ್ತಿ, ಆದರ ಎಲ್ಲವೂ ಮೆಚ್ಚುವಂಥದ್ದೆ. ಬಹುಶಃ ಜಗತ್ತಿನ ಯಾವುದೇ ದೇಶಗಳಲ್ಲಿ ಇಲ್ಲಿನ ಜನರು ಆಚರಿಸುವಷ್ಟು ಹಬ್ಬ ಆಚರಿಸಲಾರರು. ದೀಪಾವಳಿ, ಹೋಳಿ, ದಸರಾ, ಕ್ರಿಸ್‌ಮಸ್ ಎಲ್ಲ ಹಬ್ಬಗಳ ಆಚರಣೆಗಳೂ ವಿಭಿನ್ನ ಅನುಭವ ನೀಡುತ್ತವೆ. ರಂಗಿನ ಹಬ್ಬ ಹೋಳಿಯನ್ನು ಇವರು ಬಹುವಾಗಿ ಮೆಚ್ಚುತ್ತಾರೆ. ಹಬ್ಬದ ನೆಪದಲ್ಲಿ ನಡೆಯುವ ರಂಗಿನೋಕುಳಿ ಪುಳಕ ಕೊಡುತ್ತದಂತೆ.

## ಬಾಯಲ್ಲಿ ನೀರೂರಿಸುವ ಚಿಕನ್

ಪರಾಟ, ಚಿಕನ್ ಬಿರಿಯಾನಿ, ದೋಸೆ ಇವರ ಅಚ್ಚುಮೆಚ್ಚಿನ ಊಟ ತಿಂಡಿ. ಚಿಕನ್ ಸ್ವಾದ ಬಾಯಲ್ಲಿ ನೀರೂರಿಸುತ್ತದೆ. ಇಲ್ಲಿನ ಸಾಂಪ್ರದಾಯಿಕ ಅಡುಗೆಯನ್ನೂ ಇಷ್ಟಪಡುತ್ತೇವೆ. ಅಲ್ಲದೆ ಅವುಗಳನ್ನು ಮನೆಯಲ್ಲಿ ತಯಾರಿಸುವುದನ್ನೂ ಕಲಿತಿದ್ದೇನೆ' ಎನ್ನುತ್ತಾರೆ ಮಟಿಲ್ಡೆ.

■ ಅವನೀಶ್